# ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ ಹಾಗೂ ವಿಶೇಷ ನ್ಯಾಯಾಧೀಶರ ನ್ಯಾಯಾಲಯ, ಹಾವೇರಿ.

## ಪ್ರಕರಣ ಸಂಖ್ಯೆ: ಸ್ಪೆಷಲ್ ಎನ್.ಡಿ.ಪಿ.ಎಸ್.06/2023

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಬಸವರಾಜ ಬೆಟಗೇರಿ | ಅಸಾ : **04** |
| ತಂದೆಯ ಹೆಸರು | : | ಅಣ್ಣಪ್ಪ | ಚಾಸಾ : 16 |
| ವಯಸ್ಸು | : | 59 ವರ್ಷ | |
| ಉದ್ಯೋಗ | : | ನಿವೃತ್ತ ಪಿ.ಎಸ್.ಐ. | |
| ವಾಸ ಸ್ಥಳ | : | ಹಾವೇರಿ. | |

ದಿನಾಂಕ: **05/08/2026** ರಂದು ಸಾಕ್ಷಿಯನ್ನು ಕರೆಯಿಸಿ ಸತ್ಯಪ್ರತಿಜ್ಞೆ ಬೋಧಿಸಲಾಯಿತು.

**ಮುಖ್ಯ ವಿಚಾರಣೆ ಮಾನ್ಯ ಸಾರ್ವಜನಿಕ ಅಭಿಯೋಜಕರಿಂದ: –**

1. ಮೇ-2023 ರಿಂದ ಅಕ್ಟೋಬರ್-2024 ರವರೆಗೆ ನಾನು ಹಾವೇರಿಯ ಸಿ.ಇ.ಎನ್. ಕ್ರೈಂ ಪೊಲೀಸ ಠಾಣೆಯ ಪಿ.ಎಸ್.ಐ. ಎಂದು ಕೆಲಸ ಮಾಡಿದ್ದೇನೆ.

2. ದಿನಾಂಕ:21/08/2023 ರಂದು ಚಾಸಾ-15 ರಿಂದ ಈ ಕೇಸಿನ ಕಡತವನ್ನು ಪಡೆದು ಪರಿಶೀಲಿಸಿ ಇನವೆಂಟರಿ ಕುರಿತು ಪರವಾನಿಗೆ ಕೋರಿ ನ್ಯಾಯಾಲಯಕ್ಕೆ ಮನವಿ ಸಲ್ಲಿಸಿದೆ. ಸದರಿ ಮನವಿಯನ್ನು ಈಗ ನಿಪಿ-26 ಎಂದು ಗುರುತಿಸಲಾಯಿತು. ದಿನಾಂಕ:24/08/2023 ರಂದು ವಾಹನದ ಮಾಲೀಕರ ವಿವರ ನೀಡುವಂತೆ ಆರ್.ಟಿ.ಓ.ರವರಿಗೆ ವಿನಂತಿಸಿಕೊಂಡೆ. ನನ್ನ ಮನವಿಗಳನ್ನು ಈಗ ನಿಪಿ-27 ಮತ್ತು ನಿಪಿ-28 ಎಂದು ಗುರುತಿಸಲಾಯಿತು.

3. ಕಾನೂನು ಸಂಘರ್ಷಕ್ಕೆ ಒಳಗಾದ ಶಫಿವುಲ್ಲಾ ಎನ್ನುವ ಬಾಲಕನ ಶಾಲಾ ದಾಖಲಾತಿ ನೀಡುವಂತೆ ಮನವಿ ಸಲ್ಲಿಸಿದೆ. ಸದರಿ ಮನವಿಯನ್ನು ಈಗ ನಿಪಿ-29 ಎಂದು ಗುರುತಿಸಲಾಯಿತು. ನಕ್ಷೆ ತಯಾರಿಸಿಕೊಡುವಂತೆ ಪಿಡಬ್ಲೂಡಿ ಇಲಾಖೆಯವರಿಗೆ ಮನವಿ ಸಲ್ಲಿಸಿದೆ. ಸದರಿ ಮನವಿಯನ್ನು ಈಗ ನಿಪಿ-30 ಎಂದು ಗುರುತಿಸಲಾಯಿತು. ನಿಪಿ-22 ಮತ್ತು 23 ಆರ್.ಟಿ.ಓ.ರವರು ನೀಡಿದ ವಿವರಗಳನ್ನು ಪಡೆದೆ. ಶಾಲೆಯವರು ನೀಡಿದ ಪ್ರಮಾಣ ಪತ್ರ ಪಡೆದೆ. ಅದನ್ನು ಈಗ ನಿಪಿ-31, ನನ್ನ ಸಹಿಯನ್ನು ನಿಪಿ-31(ಎ) ಎಂದು ಗುರುತಿಸಲಾಯಿತು.

4. ದಿನಾಂಕ:04/09/2023 ರಂದು ನ್ಯಾಯಾಲಯದಲ್ಲಿ ಸ್ವತ್ತುಗಳನ್ನು ಹಾಜರು ಮಾಡಿ ಇನವೆಂಟರಿ ಮಾಡಿಸಿದೆ. ನ್ಯಾಯಾಧೀಶರು ನೀಡಿದ ಪ್ರಮಾಣ ಪತ್ರವನ್ನು ಈಗ ನಿಪಿ-32 ಎಂದು ಗುರುತಿಸಲಾಯಿತು. ವಸ್ತುಗಳ ಕುರಿತು ನಾನು ಸಲ್ಲಿಸಿದ ಅನೆಕ್ಸರ್-1 ಮತ್ತು 2 ನ್ನು ನಿಪಿ-33 ಹಾಗೂ ಇನವೆಂಟರಿ ಕಾಲಕ್ಕೆ ಪಡೆದ 16 ಫೋಟೋಗಳನ್ನು ನಿಪಿ-34 ಎಂದು ಗುರುತಿಸಲಾಯಿತು. ಇನವೆಂಟರಿ ಕಾಲಕ್ಕೆ ಪಡೆದ ಸ್ಯಾಂಪಲ್ ಮತ್ತು ಇತರ ಮುದ್ದೆಮಾಲನ್ನು ಗುರುತಿಸಬಲ್ಲೆ. ಈಗ ತೋರಿಸಿದ 3 ಗಾಂಜಾ ಪೊಟ್ಟಣಗಳು ಸ್ಯಾಂಪಲ್ ಗಾಗಿ ಪಡೆದುವೇ ಇರುತ್ತವೆ. ಅವುಗಳನ್ನು

ಮುಮಾ-7 ರಿಂದ 9 ಎಂದು ಗುರುತಿಸಲಾಯಿತು. ಮುಮಾ-7 ರಿಂದ 9 ಎಫ್.ಎಸ್.ಎಲ್. ರವರಿಗೆ ಕಳಿಸಲು ಪಡೆದ ಗಾಂಜಾ ಸ್ಯಾಂಪಲಗಳು ಇದ್ದು, ಪರೀಕ್ಷೆ ನಂತರ ವಾಪಾಸು ಬಂದಿರುತ್ತವೆ. ದಿನಾಂಕಃ05/09/2023 ರಂದು ಆರ್.ಎಫ್.ಎಸ್.ಎಲ್., ದಾವಣಗೆರೆಗೆ ಕಳಿಸಿದೆ. ಗುರುತಿಗಾಗಿ ಪಡೆದ 3 ಸ್ಯಾಂಪಲಗಳನ್ನು ಈಗ ಮುಮಾ-10 ರಿಂದ 12 ಎಂದು ಗುರುತಿಸಲಾಯಿತು (ಮುಮಾ-7 ರಿಂದ 9 ಇಲಿ ಕಡಿದಿರುತ್ತವೆ).

5. ದಿನಾಂಕಃ13/09/2023 ರಂದು ಆರ್.ಎಫ್.ಎಸ್.ಎಲ್. ನಿಂದ ಬಂದ ವರದಿ ಪಡೆದೆ. ಅದನ್ನು ಈಗಾಗಲೇ ನಿಪಿ-24 ಎಂದು ಗುರುತಿಸಲಾಗಿದೆ. ಒಂದು ಮೊಬೈಲು ಮತ್ತು 2 ವಾಹನಗಳನ್ನು ಬಿಡುಗಡೆ ಮಾಡುವಂತೆ ನ್ಯಾಯಾಲಯ ಹೊರಡಿಸಿದ ಆದೇಶದ ಪ್ರತಿ ಪಡೆದು ಬಿಡುಗಡೆ ಮಾಡಿದೆ. ದಿನಾಂಕಃ19/09/2023 ರಂದು ಪಿಡಬ್ಲೂಡಿ ಅಧಿಕಾರಿ ನೀಡಿದ ನಕ್ಷೆ ಸಹಿತ ಪತ್ರವನ್ನು ಪಡೆದೆ. ಪಿಡಬ್ಲೂಡಿರವರ ಪತ್ರವನ್ನು ನಿಪಿ-35 ಮತ್ತು ನಕ್ಷೆಯನ್ನು ನಿಪಿ-36 ಎಂದು ಗುರುತಿಸಲಾಯಿತು.

6. ಚಾಸಾ-9 ತಯಾರಿಸಿದ ಒಂದು ನಕ್ಷೆಯನ್ನು ಸಂಗ್ರಹಿಸಿದೆ. ಸದರಿ ನಕ್ಷೆಯನ್ನುನಿಪಿ-37 ಎಂದು ಗುರುತಿಸಲಾಯಿತು. ತನಿಖೆ ಮುಗಿಸಿ ದೋಷಾರೋಪಣಾ ಪತ್ರ ಸಲ್ಲಿಸಿದೆ.

**<u>ಪಾಟೀ ಸವಾಲು 2 ನೇ ಆರೋಪಿ ಪರ ಶ್ರೀ ಎಂ.ಎಂ.ಬಿ. ವಕೀಲರಿಂದಃ-</u>**

7. ಇನವೆಂಟರಿ ಕುರಿತು ನಾನು ಮನವಿ ಸಲ್ಲಿಸಿಲ್ಲ ಎನ್ನುವುದು ಸುಳ್ಳು. ವಾಹನಗಳ ವಿವರ ನೀಡುವಂತೆ ಆರ್.ಟಿ.ಓ.ರವರಿಗೆ ನಾನು ಕೇಳಿಕೊಂಡಿಲ್ಲ ಮತ್ತು ವಿವರಗಳನ್ನು ಪಡೆದಿಲ್ಲ ಎನ್ನುವುದು ಸುಳ್ಳು. ಜಾಗೆ ಪರಿಶೀಲಿಸಿ ನಕ್ಷೆ ನೀಡುವಂತೆ ಪಿಡಬ್ಲೂಡಿರವರಿಗೆ ನಾನು ಕೇಳಿಕೊಂಡಿಲ್ಲ, ಅವರು ಜಾಗೆ ಪರಿಶೀಲಿಸಿ ನಕ್ಷೆ ತಯಾರಿಸಿಕೊಟ್ಟಿಲ್ಲ ಎನ್ನುವುದು ಸುಳ್ಳು. ಶಾಲೆಯವರು ನಿಪಿ-31 ರಂತೆ ಪ್ರಮಾಣ ಪತ್ರ ನೀಡಿಲ್ಲ ಎನ್ನುವುದು ಸುಳ್ಳು. ಇನವೆಂಟರಿ ಕುರಿತು ನಾನು ಸ್ವತ್ತನ್ನು ಹಾಜರುಮಾಡಿಲ್ಲ ಎನ್ನುವುದು ಸುಳ್ಳು. ನಿಪಿ-34 ಪೋಟೋಗಳನ್ನು ಸೃಷ್ಟಿಸಲಾಗಿದೆ ಎನ್ನುವುದು ಸುಳ್ಳು. ಇನವೆಂಟರಿ ಕಾಲಕ್ಕೆ ಮುಮಾ-7 ರಿಂದ 12 ರಂತೆ ಸ್ಯಾಂಪಲ್ ಸಂಗ್ರಹಿಸಿಕೊಟ್ಟಿಲ್ಲ ಎನ್ನುವುದು ಸುಳ್ಳು.

8. ಚಾಸಾ-1 ರ ಸಲ್ಲಿಸಿದ ದೂರಿಗೆ ಅನುಕೂಲವಾಗುವಂತೆ ದೋಷಾರೋಪಣಾ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎನ್ನುವುದು ಸುಳ್ಳು. ನಿಪಿ-24 ಎಫ್.ಎಸ್.ಎಲ್. ವರದಿ ನಾನು ಪಡೆದಿಲ್ಲ ಎನ್ನುವುದು ಸುಳ್ಳು. ಚಾಸಾ-9 ನಿಪಿ-37 ರಂತೆ ನಕ್ಷೆ ತಯಾರಿಸಿಕೊಟ್ಟಿಲ್ಲ ಎನ್ನುವುದು ಸುಳ್ಳು. ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎನ್ನುವುದು ಸುಳ್ಳು.

**<u>ಮರು ವಿಚಾರಣೆಃ</u>** ಇಲ್ಲ.

**(**ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇಲೆ ಬೆರಳಚ್ಚು ಮಾಡಲಾಯಿತು.**)**
ಓ ಹೇ ಕೇ ಸರಿ ಇದೆ

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಹಾಗೂ ವಿಶೇಷ ನ್ಯಾಯಾಧೀಶರು, ಹಾವೇರಿ.